INDIAN JOURNAL OF HISTORY AND ARCHAEOLOGY
ISSN (e):2582-225X www.ijha.in
Vol-7, Issue -5, September-October, 2025
PageNo,29-38
Peer -Reviewed, Refereed Journal

# ಆರೋಗ್ಯ ಕಾಪಾಡುವಲ್ಲಿ ಸಾಂಪ್ರದಾಯಿಕ ಔಷಧಿಗಳ ಬಳಕೆ: ಒಂದು ಸಮಾಜಶಾಸ್ತ್ರೀಯ ಅವಲೋಕನ

ಭಾಗ್ಯಲಕ್ಷ್ಮಿ ಜಿ.[1]

## ಅಮೂರ್ತ

ಮಾನವ ಮತ್ತು ಆರೋಗ್ಯ ಸಮಾಜದ ಪ್ರಮುಖ ಘಟಕಗಳಾಗಿವೆ. ಈ ಎರಡನ್ನು ಒಂದೇ ನಾಣ್ಯದ ಎರಡು ಮುಖಗಳು ಎಂದು ಹೇಳಿದರು ತಪ್ಪಾಗಲಾರದು. ಮಾನವನಿಗೆ ಆರೋಗ್ಯ ಎಂಬುದು ಪ್ರಮುಖವಾದ ಅಂಶವಾಗಿದ್ದು, ಇದರ ರಕ್ಷಣೆಯು ಆತನ ಮೂಲಭೂತ ಹಕ್ಕಾಗಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆ ತಿಳಿಸಿದೆ. ಪ್ರಸ್ತುತ ದಿನಗಳಲ್ಲಿ ಮಾನವನು ಆರೋಗ್ಯ ಕಾಪಾಡುವಲ್ಲಿ ಅನೇಕ ಆವಿಷ್ಕಾರಗಳು, ಸಂಶೋಧನೆಗಳು, ಅಧ್ಯಯನಗಳು ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ನಡೆಯುತ್ತಿದ್ದು ಅಂಗೈಯಲ್ಲಿಯೇ ಆರೋಗ್ಯದ ಎಲ್ಲಾ ಸಮಸ್ಯೆಗಳಿಗೂ ಪರಿಹಾರ ಲಭ್ಯವಾಗುವಂತಾಗಿದೆ. ಆದರೆ ಪ್ರಪಂಚ ವೈಜ್ಞಾನಿಕವಾಗಿ ಎಷ್ಟು ಮುಂದುವರೆದರೂ ಸಹ ಕೆಲವೊಂದು ಆರೋಗ್ಯದ ಸಮಸ್ಯೆಗಳಿಗೆ ಔಷಧಿಯನ್ನು ಕಂಡುಹಿಡಿಯುವಲ್ಲಿ  ವಿಫಲವಾಗಿರುವುದನ್ನು ಸಹ ಕಾಣಬಹುದು. ಈ ಸಮಯದಲ್ಲಿ ಜನರ ಆರೋಗ್ಯದ ಸಮಸ್ಯೆಗಳಿಗೆ ನೆರವಾಗಿದ್ದು ಸಾಂಪ್ರದಾಯಿಕ ಔಷಧಿಯಾಗಿದೆ. ಇದಕ್ಕೆ ಉತ್ತಮ ಉದಾಹರಣೆಯೆಂದರೆ, ಕೋವಿಡ್ ಸಮಯದಲ್ಲಿ ಜನರು ಹೆಚ್ಚಾಗಿ ಮನೆ ಔಷಧಿಗೆ ಆದ್ಯತೆಯನ್ನು ನೀಡಿದ್ದಾಗಿದೆ. ಪ್ರಸ್ತುತ ದಿನಗಳಲ್ಲಿ ವೈಜ್ಞಾನಿಕ ಔಷಧಿ ಎಷ್ಟೇ ಪ್ರಾಮುಖ್ಯತೆಯನ್ನು ಪಡೆದುಕೊಂಡರು ಸಹ ಜನರು ಸಂಪ್ರದಾಯಿಕ ಔಷಧಿಗಳ ಕಡೆ ಗಮನಹರಿಸಿದ್ದಾರೆ. ಮತ್ತು ಪ್ರಪಂಚನಾದ್ಯಂತ ಇಂದು ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತಿರುವುದರ ಬಗ್ಗೆ ವಿಶ್ವ ಆರೋಗ್ಯ ಸಂಸ್ಥೆ ವರದಿಯನ್ನು ನೀಡಿದೆ. ಜೊತೆಗೆ ಟಿಸಿಎಎಮ್ (ಟ್ರೆಡಿಷನಲ್ ಕಾಂಪ್ಲಿಮೆಂಟರಿ ಮತ್ತು ಆಲ್ಟರ್ನೇಟಿವ್ ಮೆಡಿಸಿನ್) ಅನ್ನು ಉತ್ತೇಜಿಸಿದೆ. ಆರೋಗ್ಯ ಕಾಪಾಡುವಲ್ಲಿ ಪ್ರಾಚೀನ ಕಾಲದಿಂದ ಇಲ್ಲಿನವರೆಗೂ ಸಾಂಪ್ರದಾಯಿಕ ಔಷಧಿಯು ತನ್ನದೆ ಆದ ಪ್ರಾಮುಖ್ಯತೆಯನ್ನು ಪಡೆದಿದೆ. ಸಾಂಪ್ರದಾಯಿಕ ಔಷಧಿಯು ಆರೋಗ್ಯವನ್ನು

---

[1].ಸಂಶೋಧನಾ ವಿದ್ಯಾರ್ಥಿನಿ,ಸಮಾಜಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ,ಬೆಂಗಳೂರು

ಯಾವ ರೀತಿಯಾಗಿ ಕಾಪಾಡುವಲ್ಲಿ ಪ್ರಾಮುಖ್ಯತೆಯನ್ನು ಪಡೆದಿದೆ ಎಂಬುದನ್ನು ತಿಳಿಯುವುದು ಈ ಲೇಖನದ ಉದ್ದೇಶವಾಗಿದೆ

**ಪೀಠಿಕೆ**

ಮಾನವನಿಗೆ ಎಷ್ಟೇ ಸಂಪತ್ತು ಇದ್ದರೂ ಸಹ ಆರೋಗ್ಯ ಎಂಬುದು ಇಲ್ಲದಿದ್ದರೆ ಸಂಪತ್ತು ವ್ಯರ್ಥವಾಗುತ್ತದೆ. ಈ ಕಾರಣದಿಂದಲೇ 'ಆರೋಗ್ಯವೇ ಭಾಗ್ಯ' ಎಂಬ ಗಾದೆ ಬಂದಿರುವುದನ್ನು ನಾವು ಕಾಣಬಹುದಾಗಿದೆ. ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ ಮಾನವನ ಮೂಲಭೂತ ಹಕ್ಕು ಎಂದರೆ ಮಾನವನ ಆರೋಗ್ಯವನ್ನು ಕಾಪಾಡುವ ಹಕ್ಕಾಗಿದೆ. ಪ್ರಸ್ತುತ ದಿನಗಳಲ್ಲಿ ನಾವು ಆರೋಗ್ಯಕ್ಕೆ ಸಂಬಂಧಿಸಿದಂತೆ ಹಲವಾರು ಸಂಶೋಧನೆಗಳು ಆವಿಷ್ಕಾರಗಳು ಮತ್ತು ಅಧ್ಯಯನಗಳು ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ನಡೆಯುತ್ತಿದೆ, ಕಾರಣ ಪ್ರತಿಯೊಬ್ಬ ಮಾನವನಿಗೂ ಆರೋಗ್ಯ ಎಂಬುದು ಬಹು ಮುಖ್ಯವಾದ ಅಂಶವಾಗಿದೆ. ಈ ಕಾರಣದಿಂದಲೇ ಆರೋಗ್ಯವು ಕೇವಲ ಒಂದು ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿರದೆ ಎಲ್ಲಾ ಕ್ಷೇತ್ರದ ತತ್ವಜ್ಞಾನಿಗಳು, ವಿಜ್ಞಾನಿಗಳು, ಸಮಾಜಶಾಸ್ತ್ರಜ್ಞರು, ಅರ್ಥಶಾಸ್ತ್ರಜ್ಞರು ಮತ್ತು ಸಂಶೋಧಕರು ಇಂದು ಆರೋಗ್ಯದ ಬಗ್ಗೆ ಅಧ್ಯಯನಗಳನ್ನು ಮಾಡುತ್ತಿದ್ದಾರೆ. ಪ್ರಸ್ತುತ ದಿನಗಳಲ್ಲಿ ವೈಜ್ಞಾನಿಕ ಕ್ಷೇತ್ರವು ಬಹಳ ದೀರ್ಘವಾಗಿ ಅಭಿವೃದ್ಧಿಯನ್ನು ಹೊಂದಿದ್ದು, ಎಲ್ಲಾ ಆರೋಗ್ಯದ ಸಮಸ್ಯೆಗಳಿಗೆ ಮಾನವನ ಅಂಗೈಯಲ್ಲಿಯೇ ಪರಿಹಾರವನ್ನು ಕಾಣಬಹುದು. ಇದಕ್ಕಾಗಿ ಪ್ರಪಂಚದಾದ್ಯಂತ ಸರ್ಕಾರಗಳು ಆರೋಗ್ಯ ಅಭಿವೃದ್ಧಿ ಕಾರ್ಯಕ್ರಮಗಳು, ಯೋಜನೆಗಳನ್ನು, ನೀತಿಗಳನ್ನು, ರಕ್ಷಣಾ ಕ್ರಮಗಳನ್ನು, ಆರೋಗ್ಯ ಸಂಸ್ಥೆಗಳನ್ನು ಜಾರಿಗೆ ತಂದಿವೆ. ಇದರ ಜೊತೆಗೆ ಇನ್ನೂ ಆರೋಗ್ಯವನ್ನು ಸುಧಾರಿಸುವ ಸಲುವಾಗಿ ಆರೋಗ್ಯಕ್ಕೆ ಸಂಬಂಧಿಸಿದಂತೆ ಹೆಚ್ಚು ಉನ್ನತ ಅಧ್ಯಯನಗಳು, ಸಂಶೋಧನಗಳು ನಡೆಯಬೇಕೆಂದು ಸರ್ಕಾರಗಳು ಪ್ರೋತ್ಸಾಹಿಸುತ್ತಿರುವುದನ್ನು ಕಾಣಬಹುದು.

ಆದರೆ ಆರೋಗ್ಯದಲ್ಲಿ ಎಷ್ಟೇ ವೈಜ್ಞಾನಿಕ ಪ್ರಗತಿಯಾದರೂ ಸಹ 21ನೇ ಶತಮಾನದಲ್ಲಿಯೂ ಮಾನವನ ಕೆಲವು ಆರೋಗ್ಯದ ಸಮಸ್ಯೆಗಳಿಗೆ ಆಧುನಿಕ ವೈದ್ಯಕೀಯ ಔಷಧಿಯಿಂದ ಪರಿಹಾರ ಲಭ್ಯವಾಗುತ್ತಿಲ್ಲ. ಇಂತಹ ಸಮಸ್ಯೆಗಳಿಗೆ ಪರಿಹಾರ ದೊರೆತಿದ್ದು 'ಪ್ರಾಚೀನ ಜನರ ಔಷಧಿ' ಅಥವಾ 'ಅಜ್ಜಿಯ ಔಷಧಿ' ಎಂದು ಹೆಸರುವಾಸಿಯಾದ ಸಾಂಪ್ರದಾಯಿಕ ಔಷಧಿಯಾಗಿದೆ. ಇದಕ್ಕೆ ಉತ್ತಮ ಉದಾಹರಣೆಯೆಂದರೆ ಕೋವಿಡ್ ವಿರುದ್ಧ ಜನರು ಮನೆಯಲ್ಲಿ ಜೀರಿಗೆ, ಮೆಣಸು, ಕಷಾಯ, ಶುಂಠಿ ಮುಂತಾದವುಗಳನ್ನು ಬಳಸಿ ತಮ್ಮ ಆರೋಗ್ಯವನ್ನು ಕಾಪಾಡಿಕೊಂಡಿದ್ದಾಗಿದೆ. ಈ ರೀತಿಯಾಗಿ ಪ್ರಾಚೀನ ಕಾಲದಿಂದ ಇಲ್ಲಿನವರಿಗೆ ನಾವು ಸಾಂಪ್ರದಾಯಿಕ ಔಷಧಿಯನ್ನು ಒಂದಲ್ಲ ಒಂದು ರೀತಿಯಾಗಿ ಬಳಸುತ್ತಿದ್ದೇವೆ. ಪ್ರಸ್ತುತ ದಿನಗಳಲ್ಲಿ ಜನರು ಉತ್ತಮ ಆರೋಗ್ಯಕ್ಕಾಗಿ ಹೆಚ್ಚಿನ ಪ್ರಾಶಸ್ತ್ಯವನ್ನು ಸಾಂಪ್ರದಾಯಿಕ ಔಷಧಿಗೆ ನೀಡುತ್ತಿದ್ದಾರೆ. ಇದರ ಜೊತೆಗೆ ಪರ್ಯಾಯ ಔಷಧಿಯು ಸಹ

ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಪ್ರಪಂಚದ 75ರಷ್ಟು ಜನರಿಗೂ ಆರೋಗ್ಯ ಕಾಪಾಡುವಲ್ಲಿ ಟಿಸಿಎಎಂ(Traditional complimentary alternative medicine)ನ ಆಯ್ಕೆ ಮಾಡುತ್ತಿದ್ದಾರೆ ಎಂದು ವಿಶ್ವ ಆರೋಗ್ಯ ಸಂಸ್ಥೆ ವರದಿಯನ್ನು ನೀಡಿದೆ. ಈ ಕಾರಣಕ್ಕಾಗಿ ಸಾಂಪ್ರದಾಯಿಕ ಔಷಧಿಗಳನ್ನು ಅಧ್ಯಯನ ಮಾಡುವುದು ಮುಖ್ಯವಾಗಿದೆ.

## ಭಾರತದಲ್ಲಿ ಸಾಂಪ್ರದಾಯಿಕ ಔಷಧಿಗಳ ಐತಿಹಾಸಿಕ ಹಿನ್ನೆಲೆ

ಮಾನವನು ಕಾಡುಗಳಲ್ಲಿ, ಬೆಟ್ಟಗಳಲ್ಲಿ, ಬಯಲು ಪ್ರದೇಶಗಳಲ್ಲಿ, ಮರಗಳಲ್ಲಿ ವಾಸಮಾಡುತ್ತಾ ಅಲೆಮಾರಿಯಾಗಿ ಜೀವನವನ್ನು ನಡೆಸುತ್ತಿದ್ದನು. ಈ ಸಮಯದಲ್ಲಿ ಈತನ ಮುಖ್ಯ ಉದ್ದೇಶ ಕೇವಲ ಆಹಾರ ಸಂಗ್ರಹಣೆ ಮಾಡುವುದು ಅಷ್ಟೇ ಆಗಿತ್ತು. ಮಾನವನ ಬೌದ್ಧಿಕಮಟ್ಟ ಬೆಳೆಯುತ್ತಿದ್ದಂತೆ ಮಾನವನು ಕಡೆ ನೆಲೆ ನಿಂತು ವಾಸಿಸಲು ಮುಂದಾದನು. ಆ ಸಮಯದಲ್ಲಿ ಮಾನವನು ಆಹಾರಕ್ಕಾಗಿ ಬೇಟೆಯಾಡುವ ಸಮಯದಲ್ಲಿ ಪ್ರಾಣಿಗಳಿಂದ ತನ್ನನ್ನು ತಾನು ರಕ್ಷಿಸಿಕೊಳ್ಳುವಂತಹ ಕಲೆಯನ್ನು ಕರಗತ ಮಾಡಿಕೊಳ್ಳುತ್ತಾ, ಅನೇಕ ಬೇಟೆ ತಂತ್ರಗಳನ್ನು ಕಲಿತನು, ಕ್ರಮೇಣ ಆರೋಗ್ಯದ ಅರಿವು ಮೂಡಿಸಿಕೊಂಡ ಮಾನವ ಬೇಟೆಯಾಡುವ ಸಂದರ್ಭಲ್ಲಿ ತನಗಾದ ಗಾಯಗಳು, ಹಾಗೆಯೇ ಸಣ್ಣ ಪುಟ್ಟ ರೋಗಗಳ ನಿವಾರಣೆಗೆ ಮದ್ದು ಕಂಡುಹಿಡಿಯಲು ಪ್ರಾರಂಬಿಸಿದನು. ಈ ಸಮಯದಲ್ಲಿ ಮಾನವನು ಕಾಡಿನಲ್ಲಿ ವಾಸ ಮಾಡುತ್ತಿದ್ದ ಕಾರಣ ಸಸ್ಯ ಸಂಪನ್ಮೂಲಗಳಿಗೆ ಯಾವ ಕೊರತೆಯೂ ಇರಲಿಲ್ಲ, ಗಿಡಮೂಲಿಕೆಗಳಿಂದ ಸಸ್ಯಗಳಿಂದ ಪ್ರಾಣಿಗಳಿಂದ, ಲಭ್ಯವಾಗುವ ನೈಸರ್ಗಿಕ ಮದ್ದನ್ನು ಔಷಧಿಯನ್ನಾಗಿ ಪರಿವರ್ತಿಸಿ ಬಳಸಲು ಮುಂದಾದನು. ಈ ಔಷಧೀಯ ಬಳಕೆಯನ್ನು ಜನರು ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ಕಲಿಸುತ್ತಾ ಬಳಕೆ ಮಾಡುತ್ತಾ ಬಂದರು. ಮುಂದೆ ಇದು ಜಾನಪದ ಔಷಧಿ ಅಥವಾ ಸಾಂಪ್ರದಾಯಿಕ ಔಷಧಿ ಎಂಬ ಹೆಸರನ್ನು ಪಡೆದುಕೊಂಡಿತು. ಪ್ರಸ್ತುತ ದಿನಗಳಲ್ಲಿ ಇಂದಿಗೂ ಬುಡಕಟ್ಟು ಜನರು ಹೆಚ್ಚಾಗಿ ಸಾಂಪ್ರದಾಯಿಕ ಔಷಧಿಗಳನ್ನು ಬಳಸುತ್ತಿದ್ದಾರೆ. ಈಜಿಪ್ಟ್ ನಾಗರಿಕತೆಯಿಂದ ಪ್ರಾರಂಭವಾದ ಜಾನಪದ ವೈದ್ಯ ಭಾರತದಲ್ಲಿ ಒಂದನೇ ಶತಮಾನದಲ್ಲಿ ಗಿಡಮೂಲಿಕೆಗಳ ಬಳಕೆ ನಡೆದಿತ್ತು ಎಂದು ಚರಕ ಸಂಹಿತೆಯಲ್ಲಿ ಮಾಹಿತಿ ಇರುವುದನ್ನು ನಾವು ಕಾಣಬಹುದಾಗಿದೆ.

**ಔಷಧಿ ಎಂದರೆ**:– 'ಒಂದು ನಿರ್ದಿಷ್ಟ ರೋಗಕ್ಕೆ ಅಥವಾ ಗಾಯಕ್ಕೆ ನಿರ್ದಿಷ್ಟ ರೂಪದಲ್ಲಿ ನೀಡುವ ಮದ್ದು'.

**ಸಾಂಪ್ರದಾಯಿಕ ಔಷಧಿ ಎಂದರೆ** 'ನೈಸರ್ಗಿಕವಾಗಿ ಲಭ್ಯವಿರುವ ಗಿಡಮೂಲಿಕೆಗಳನ್ನು ಬಳಸಿಕೊಂಡು ಪ್ರಾಥಮಿಕವಾಗಿ ನೀಡುವ ಔಷಧಿಯಾಗಿದ'. ಸಾಂಪ್ರದಾಯಿಕ ಔಷದಿಗಳು:–ಆಯುರ್ವೇದ, ಸಿಬಿಟಿಷರಿ,

ಯುನಾನಿ, ಯೋಗ, ಹೋಮಿಯೋಪತಿ, ಯುರೋಪಿಯನ್ ಔಷಧಿ, ಚೀನಿ ಔಷಧಿ, ಸಾಂಪ್ರದಾಯಿಕ ಆಫ್ರಿಕಾ ಔಷಧಿಗಳು.

**ಆಯುಷ್**

ಭಾರತೀಯ ಜನತಾ ಪಕ್ಷವು ಅಧಿಕಾರದಲ್ಲಿದ್ದಾಗ 2004 ರಲ್ಲಿ "ಆಯುಷ್ಯ ಆರೋಗ್ಯ ರಕ್ಷಣೆ" ಕಡೆಗೆ ಗಮನವನ್ನು ಹರಿಸಿತು, ಆಯುಷ್, ನವೆಂಬರ್ 9 2014ರಲ್ಲಿ ಆಯುಷ್ ಸಚಿವಾಲಯವು ಹೊರಹೊಮ್ಮಿದ್ದು ಇದು ಗ್ರಾಮೀಣ ಜನರನ್ನು ಗುರಿಯಾಗಿಸಿಕೊಂಡಿದೆ. ಆಯುಷ್ ಉದ್ದೇಶ, ಭಾರತದಲ್ಲಿ ಸ್ಥಳೀಯ ಪರ್ಯಾಯ ಔಷಧಿ ವ್ಯವಸ್ಥೆಗಳ ಶಿಕ್ಷಣ ಸಂಶೋಧನೆ ಮತ್ತು ಪ್ರಸರಣವನ್ನು ಅಭಿವೃದ್ಧಿಪಡಿಸಿದ ಉದ್ದೇಶವನ್ನು ಹೊಂದಿದೆ.

**ಆಯುರ್ವೇದ:–**

ಋಗ್ವೇದದಲ್ಲಿ ಆಯುರ್ವೇದದ ಬಗ್ಗೆ ತಿಳಿಸಲಾಗಿದೆ. ಸುಮಾರು ಕ್ರಿ.ಪೂ. 800 ರಿಂದಲೂ ಆಯುರ್ವೇದವನ್ನು ನಾವು ಕಾಣಬಹುದಾಗಿದೆ. ಈ ವಿದ್ಯೆಯ ಪಿತಾಮಹ " ಧನ್ವಂತರಿ", ಆದ್ದರಿಂದ ಇದನ್ನು ಧನ್ವಂತರಿ ವಿದ್ಯೆ" ಎಂದು ಸಹ ಕರೆಯುತ್ತಾರೆ. ಅದರ ಮೂಲ ಉದ್ದೇಶ, ಆರೋಗ್ಯ ಮತ್ತು ದೀರ್ಘಾಯುಷ್ಯನ್ನು ಹೆಚ್ಚಿಸುವುದು.

**ಆಯುರ್ವೇದ ಎಂದರೆ,** ರೋಗಿಯ ಆವಶ್ಯಕತೆಗಳಿಗೆ ಗಿಡಮೂಲಿಕೆ ಔಷಧಿ, ಬಾಹ್ಯ ಸಿದ್ಧತೆಗಳು, ಭೌತಿ ಚಿಕಿತ್ಸೆ ಮತ್ತು ಆಹಾರ ಬಳಕೆಯನ್ನು ಒಳಗೊಂಡಿರುವ ಚಿಕಿತ್ಸೆಯಾಗಿದೆ. ಆಯುರ್ವೇದದ ಚಿಕಿತ್ಸಾಂಶಗಳು, ಔಷಧಿಗಳು, ಸಿದ್ಧತೆಗಳು, ಭೌತಿಕ ಚಿಕಿತ್ಸೆ ಮತ್ತು ಆಹಾರದ ಬಳಕೆ ಆರೋಗ್ಯವನ್ನು ತಡೆಗಟ್ಟುವ ಚಿಕಿತ್ಸಾಕ್ರಮ, ಪ್ರಸ್ತುತ ಭಾರತದಲ್ಲಿ ಜನರು ಆಯುರ್ವೇದದ ಕಡೆಗೆ ಹೆಚ್ಚು ಗಮನವನ್ನು ನೀಡುತ್ತಿದ್ದಾರೆ.

**ಯೋಗ:–**

ಇದರ ಬೆಳವಣಿಗೆಯು ಐದು ಸಾವಿರ ವರ್ಷಗಳ ಹಿಂದೆಯೇ ಗುರುತಿಸಬಹುದು. ಆದರೆ, ಇದರ ಇತಿಹಾಸ ಅಸ್ಪಷ್ಟವಾಗಿದ್ದು ಇದನ್ನು ತಾಳೆಗರಿಗಳ ಮೇಲೆ ಬರೆದಿದ್ದಾರೆ. ಯೋಗದ ಸುಧೀರ್ಘ ಇತಿಹಾಸವನ್ನು ನಾವು ವಿವಿಧ ಹಂತಗಳಲ್ಲಿ ಕಾಣಬಹುದಾಗಿದೆ.

1.ಪೂರ್ವ ಶಾಸ್ತ್ರೀಯ ಯೋಗ 2.ಶಾಸ್ತ್ರೀಯ ಯೋಗ 3.ಶಾಸ್ತ್ರೀಯ ನಂತರ ಯೋಗ 4.ಆಧುನಿಕ ಯೋಗ

ಯೋಗ ಎಂದರೆ, ವ್ಯಾಯಾಮದ ಮೂಲಕ ಮಾನವನ ಆರೋಗ್ಯವನ್ನು ಕಾಪಾಡಿಕೊಳ್ಳುವುದು.

**ಯನಾನಿ:–**

ದಕ್ಷಿಣ ಏಷ್ಯಾ, ಮಧ್ಯ ಏಷ್ಯಾ ಸಂಸ್ಕೃತಿಯಲ್ಲಿ ಮುಸ್ಲಿಂ ಸಾಂಪ್ರದಾಯಿಕ ಔಷಧಿ ಯುನಾನಿಯಾಗಿದೆ. ಇದು ಈಜಿಪ್ಟ್ ನಾಗರಿಕತೆಯಿಂದ ಪ್ರಾರಂಭವಾಯಿತು. ಇದರ ಪಿತಾಮಹ 'ಹಿಪೋಕ್ರಿಟಿಕ್' ಭಾರತಕ್ಕೆ ಈ ಔಷಧಿಯು 8ನೇ ಶತಮಾನದಲ್ಲಿ ಪ್ರವೇಶ ಮಾಡಿತು. ಯುನಾನಿ ಎಂದರೆ, ಮಾನವನ ದೇಹದ ಜೀಣಾಂಗ ಅಂಶಗಳು ಮತ್ತು ಸಾಮಿಪ್ಯ ಗುಣಗಳ ಆಧಾರದ ಮೇಲೆ ಚಿಕಿತ್ಸೆ ನೀಡುವುದಕ್ಕೆ ಯುನಾನಿ ಪದ್ಧತಿಯೆ0ದು ಕರೆಯುತ್ತಾರೆ.

**ಸಿದ್ಧಿ ಔಷಧಿ:–**

ಹರಪ್ಪ ಮತ್ತು ಮೆಹೆಂಜೋದಾರ, ನಾಗರಿಕತೆಯ ಸಮಯದಲ್ಲಿ ದಕ್ಷಿಣ ಭಾರತದ ತಮಿಳುನಾಡಿನಲ್ಲಿ ಈ ಔಷಧಿಯ ಉತ್ಪತ್ತಿಯಾಯಿತು. 'ಆಗತ್ಯಮುನಿಗಳು (ಆಗಸ್ತ್ಯಮುನಿಗಳು) ಇವರ ಪಿತಾಮಹ ಎಂದು ಕರೆಯಲಾಗುತ್ತದೆ. ಈ ಔಷಧಿಯ ತ್ರಯ ಗುಣಗಳು, ಕಫೆ ಮತ್ತು ಪಿತ್ತ, ಈ ಔಷಧೀಯ ಪ್ರಕಾರ ಮಾನವನ ದೇಹದಲ್ಲಿ ಈ ಪ್ರಯ ಗುಣಗಳು ಹೆಚ್ಚಾದರೆ, ರೋಗದ ಲಕ್ಷಣಗಳು ಕಂಡುಬರುತ್ತದೆ.

**ಹೋಮಿಯೋಪತಿ:–**

ಹೋಮಿಯೋಪತಿ ಎಂದರೆ, ಒಂದೇ ರೀತಿಯಾದ ಕಾಯಿಲೆಯಿಂದ ಬಳಲುತ್ತಿರುವ ರೋಗ ಎಂಬರ್ಥವನ್ನು ನೀಡುತ್ತದೆ. ಇದನ್ನು ಮೊದಲು ಬಳಸಿದ್ದು, ಜರ್ಮನಿಯ ರಾಸಾಯನಶಾಸ್ತ್ರಜ್ಞ 'ಪ್ಯಾಮಿಲಿಯಲ್ ಮ್ಯಾನ್" ಎಂಬುವವರು. ಔಷಧಿಯ ಮೂಲಗಳು– ಸಸ್ಯಗಳು, ಪ್ರಾಣಿಗಳು, ಲೋಹಗಳು ಮತ್ತು ರಾಸಾಯನಿಕ ಅಂಶಗಳಾಗಿವೆ.

## ಅಧ್ಯಯನದ ಉದ್ದೇಶಗಳು

- ಆರೋಗ್ಯ ಕಾಪಾಡುವಲ್ಲಿ ಸಂಪ್ರದಾಯಿಕ ಔಷಧಿಯ ಬಳಕೆಯ ಬಗ್ಗೆ ಅರಿಯುವುದು.
- ಟಿಸಿಎಎಮ್ (ಟ್ರೆಡಿಷನಲ್ ಕಾಂಪ್ಲಿಮೆಂಟರಿ ಮತ್ತು ಆಲ್ಟರ್ನೇಟಿವ್ ಮೆಡಿಸಿನ್) ಬಗ್ಗೆ ತಿಳಿಯುವುದು.
- ಸಾಂಪ್ರದಾಯಿಕ ಔಷಧಿ ಉಪಯೋಗಗಳನ್ನು ತಿಳಿಯುವುದು.

## ಆರೋಗ್ಯ

ಮಾನವನು ಬಹಳ ದೀರ್ಘಕಾಲ ಬದುಕಬೇಕಾದರೆ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಆರೋಗ್ಯದ ಕಡೆಗೆ ಗಮನವನ್ನು ಹರಿಸಲೇ ಬೇಕಾಗುತ್ತದೆ ಈ ಕಾರಣಕ್ಕಾಗಿ ಜನರು ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿರುವುದು ಆರೋಗ್ಯಕ್ಕಾಗಿದೆ ಇದರಿಂದ ಆರೋಗ್ಯ ಎಂಬ ಅಂಶವು ಪ್ರಾಮುಖ್ಯತೆಯನ್ನು ಪಡೆದಿರುವುದು ಹಾಗಾದರೆ ಆರೋಗ್ಯ ಎಂದರೇನು ಎಂಬುದು ಮುಖ್ಯವಾಗಿದೆ.

### ಆರೋಗ್ಯ ಎಂದರೇನು?

**ಸಾಮಾನ್ಯ ಅರ್ಥದಲ್ಲಿ** ಆರೋಗ್ಯ ಎಂದರೆ, "ಒಬ್ಬ ವ್ಯಕ್ತಿಯ ಮಾನಸಿಕ ಮತ್ತು ದೈಹಿಕ ಸಮತೋಲನ ಸ್ಥಿತಿಗತಿಯನ್ನು ಆರೋಗ್ಯ ಎಂದು ಕರೆಯುತ್ತೇವೆ".

**ವಿಶ್ವ ಆರೋಗ್ಯ ಸಂಸ್ಥೆ ಪ್ರಕಾರ** "ಆರೋಗ್ಯವು ಕೇವಲ ರೋಗ ಮತ್ತು ದೌರ್ಬಲ್ಯದ ಅನುಪಸ್ಥಿತಿಯಲ್ಲ ಸಂಪೂರ್ಣ ದೈಹಿಕ ಮಾನಸಿಕ ಮತ್ತು ಸಾಮಾಜಿಕ ಯೋಗಕ್ಷೇಮದ ಸ್ಥಿತಿಯಾಗಿದೆ".

## ಆರೋಗ್ಯ ಕಾಪಾಡುವಲ್ಲಿ ಸಂಪ್ರದಾಯಿಕ ಔಷಧಿಯ ಬಳಕೆ

ಆರೋಗ್ಯ ಎಂಬುದು ಅತ್ಯಂತ ಪ್ರಮುಖವಾದ ಒಂದು ಅಂಶವಾಗಿದೆ. ಅದರ ರಕ್ಷಣೆಯ ಜವಬ್ದಾರಿಯನ್ನು ಪ್ರತಿಯೊಬ್ಬ ವ್ಯಕ್ತಿಯು ಸಹ ತೆಗೆದುಕೊಳ್ಳಬೇಕಾದದ್ದು ಅವರ ಕರ್ತವ್ಯವಾಗಿದೆ. ಪ್ರಸ್ತುತ ದಿನಗಳಲ್ಲಿ ಜನರು ತಮ್ಮ ತಾಂತ್ರಿಕ ಜೀವನ ಶೈಲಿಯೊಂದಿಗೆ ಆರೋಗ್ಯದ ನಿರ್ಲಕ್ಷ್ಯ ಮಾಡುತ್ತಿರುವ ಕಾರಣದಿಂದ ಹಲವಾರು ರೋಗ–ರುಜುನುಗಳಿಗೆ ಜನರು ತುತ್ತಾಗುತ್ತಿದ್ದಾರೆ. ಜನರ ಜೀವನಶೈಲಿಗೆ ತಕ್ಕಂತೆಯೇ ಅನಾರೋಗ್ಯದ ಸಮಸ್ಯೆಗಳು ಕಾಣಬಹುದು. ಆರೋಗ್ಯದ ಸಮಸ್ಯೆಗಳಿಂದ ಮಾನವನು ಬಹುಬೇಗನೆ ಮರಣ ಹೊಂದುತ್ತಿದ್ದಾನೆ. ಇತ್ತೀಚಿಗೆ ದಿನಗಳಲ್ಲಿ ಜನರ ಆರೋಗ್ಯ ಹೆಚ್ಚು ಅದಗೆಟ್ಟಿದ್ದು ಅವರು ಆರೋಗ್ಯದ ಬಗ್ಗೆ ಯಾವುದೇ ಕ್ರಮವನ್ನು ಕೈಗೊಂಡರೂ ಸಹ ಒಂದಲ್ಲ ಒಂದು ರೀತಿಯಾಗಿ ಅನಾರೋಗ್ಯಕ್ಕೆ ಒಳಗಾಗುತ್ತಿದ್ದಾರೆ. ಮತ್ತೊಂದು ಕಡೆ ಆರೋಗ್ಯವನ್ನು ಕಾಪಾಡಲು ಆಧುನಿಕ ವೈಜ್ಞಾನಿಕ ಔಷಧಿಯು ಬಹಳ ವೇಗವಾಗಿ ಬೆಳೆಯುತ್ತಿದೆ, ಆದರೂ ಸಹ ಜನರು ಹೆಚ್ಚು ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆ. ಇದರಿಂದ ಪಾರಾಗಲು ಜನರು ಹಿಂದಿನ ಕಾಲದ ಸಾಂಪ್ರದಾಯಿಕ ಔಷಧೀಯ ಕಡೆಗೆ ಗಮನ ಹರಿಸುತ್ತಿದ್ದಾರೆ. ಸಾಂಪ್ರದಾಯಿಕ ಔಷಧಿಯ ಮುಖಾಂತರ ಆರೋಗ್ಯವನ್ನು ಕಾಪಾಡುವುದು ಎಂದರೆ, ಸಸ್ಯ, ಪ್ರಾಣಿ ಮತ್ತು ಖನಿಜ ಆಧಾರಿತ ಔಷಧಿಗಳು, ಆಧ್ಯಾತ್ಮಿಕ ಚಿಕಿತ್ಸೆಗಳು, ಕೈಪಿಡಿ ತಂತ್ರಗಳು ಮತ್ತು ವ್ಯಾಯಾಮಗಳ ಮುಖಾಂತರ ಆರೋಗ್ಯವನ್ನು ಕಾಪಾಡುವುದಾಗಿದೆ. ಭಾರತದಲ್ಲಿ 2500ರಕ್ಕೂ ಹೆಚ್ಚು ಸಸ್ಯಗಳನ್ನು ಔಷಧಿಗೆ ಬಳಕೆ ಮಾಡುತ್ತಿದ್ದಾರೆ. ಆಯುರ್ವೇದ ಮತ್ತು ಯೋಗದಿಂದ ಜನರು ತಮ್ಮ

ಆಯುಷ್ಯವನ್ನು ಹೆಚ್ಚಿಸುವ ಕಡೆಗೆ ಗಮನಹನ್ನು ಹರಿಸುತ್ತಿದ್ದಾರೆ. ಈ ರೀತಿಯಾಗಿ ಸಾಂಪ್ರದಾಯಿಕ ಔಷಧಿಯು ತನ್ನ ಪಾತ್ರವನ್ನು ನಿರ್ವಹಿಸುತ್ತಿದೆ. ಅದಕ್ಕೆ ಪೂರಕವಾಗುವಂತೆ ಸರ್ಕಾರವನ್ನು ಆಯುಷ್ ಪ್ರೋಟೋಕಾಲ್ ಸಹ ಸ್ಥಾಪಿಸಿದೆ.

**ಕೆಲವು ಗಿಡಮೂಲಿಕ ಸೂತ್ರಗಳೆಂದರೆ**

**Clerodenrum Inerme Gorth**

**IFNA**

**Clibotium baromeutz and dioscora batatas**

**ಸಾಂಗ್ ಜುಯನ್**

**ಡಾ ಯುವನ್ ಕಷಾಯ**

ಈ ರೀತಿಯಾಗಿ ನಿಸರ್ಗದಲ್ಲಿ ಲಭ್ಯವಿರುವ ಗಿಡಮೂಲಿಕೆಗಳನ್ನು, ಪ್ರಾಣಿಗಳನ್ನು ಮತ್ತು ಖನಿಜ ಸಂಪತ್ತನ್ನು ಸೂತ್ರಗಳಾಗಿ ಪರಿವರ್ತಿಸಿ ಔಷಧಿಯನ್ನಾಗಿ ಜನರ ಆರೋಗ್ಯವನ್ನು ಕಾಪಾಡುತ್ತದೆ. ವಿಶ್ವ ಆರೋಗ್ಯ ಸಂಸ್ಥೆ 2022 ರಲ್ಲಿ ತನ್ನ ವರದಿಯಲ್ಲಿ ಶೇ. 65 ರಷ್ಟು ಜನರು ಸಾಂಪ್ರದಾಯಿಕ ಔಷಧಿಯನ್ನು ಆರೋಗ್ಯದ ಏಕೈಕ ಮೂಲವಾಗಿ ನಂಬಿದ್ದಾರೆ ಎಂದು ತಿಳಿಸಿದೆ.

## TCAM (**ಟ್ರೆಡಿಷನಲ್ ಕಾಂಪ್ಲಿಮೆಂಟರಿ ಮತ್ತು ಆಲ್ಟರ್ನೇಟಿವ್ ಮೆಡಿಸಿನ್**)

ವಿಶ್ವ ಆರೋಗ್ಯ ಸಂಸ್ಥೆಯು ಟಿಸಿಎಎಮ್ ಎಂಬುದು ಜಾಗತಿಕವಾಗಿ ಸಂಪ್ರದಾಯಿಕ ಔಷಧಿದ ಬಗ್ಗೆ ನೀತಿ ನಿಯಂತ್ರಣ, ಹಣಕಾಸು, ಶಿಕ್ಷಣ, ಸಂಶೋಧನ ಅಭ್ಯಾಸ ಮತ್ತು ಬಳಕೆಗೆ ಸಂಬಂಧಿಸಿದಂತೆ ಸಮಗ್ರ ಮಾಹಿತಿಯನ್ನು ಕಂಪೈಲ್ ಮಾಡುವ ಮೊದಲ ಪ್ರಯತ್ನವಾಗಿದೆ ಎಂದು ತಿಳಿಸಿದೆ. ಟಿಸಿಎಎಮ್ ವಿಶ್ವವಿದ್ಯಾಲಯ ಮಟ್ಟದಲ್ಲಿ ಕಾರ್ಯಕ್ರಮಗಳನ್ನು ಹೊಂದಿದ್ದು ಸಂಶೋಧನೆಗಳು ನಡೆಯುತ್ತಿವೆ. ಮ್ಯಾನ್ಮಾರ್, ನೇಪಾಳ, ಥೈಲ್ಯಾಂಡ್, ಮಾಲ್ಡೀವ್ಸ್, ಕೊರಿಯಾ ಮತ್ತು ನೇಪಾಳವು ಸಾರ್ವಜನಿಕ ಆರೋಗ್ಯ ವ್ಯವಸ್ಥೆಯಲ್ಲಿ ಟಿಸಿಎಎಮ್‌ಅನ್ನು ಸಂಯೋಜಿಸಿದೆ. TCAMನಲ್ಲಿ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಔಪಚಾರಿಕ ತರಬೇತಿ ಇಲ್ಲದ ಜಾನಪದ ವೈದ್ಯರು ಇರುತ್ತಾರೆ. ಇದರ ಮುಖಾಂತರ ಜ್ಞಾನವನ್ನು ಪಡೆದು ತರಬೇತಿ ಸಂಸ್ಥೆಗಳ ಮುಖಾಂತರ ತರಬೇತಿಯನ್ನು ನೀಡುತ್ತಾರೆ. ಇವು ವಿಶ್ವವಿದ್ಯಾಲಯಗಳ ಮಟ್ಟಿಗೆ ಪ್ರಾಮುಖ್ಯತೆಯನ್ನು ಪಡೆದಿರುವುದನ್ನು ಕಾಣಬಹುದಾಗಿದೆ. ಸಾಂಕ್ರಾಮಿಕ ರೋಗಗಳಾದ ಮಲೇರಿಯಾ ಮತ್ತು ಡೆಂಗ್ಯೂಗೆ ಸಂಪ್ರದಾಯಿಕ ಔಷಧಿ ಯಾದ ಕ್ವಿನೇನ್ ಮತ್ತು ಆರ್ಟೆಮಿಸಿನಿನ್ ಬಳಸಲಾಯಿತು.

ಹೆಚ್ಐವಿ ಏಡ್ಸ್, ಹೃದಯ ಕಾಯಿಲೆ, ಅಸ್ಥಿಪಂಜರದ ಅಸ್ವಸ್ಥಗಳು, ಕ್ಯಾನ್ಸರ್, ಮಧುಮೇಹ, ಮಾನಸಿಕ ಅಸ್ವಸ್ಥತೆ ಇವುಗಳ ಆರೈಕೆಯಲ್ಲಿ TCAM ಪ್ರಮುಖ ಪಾತ್ರ ವಹಿಸಿದೆ.

## ಸಾಂಪ್ರದಾಯಕ ಔಷಧೀಯ ಉಪಯೋಗಗಳು:–

ಸಾಂಪ್ರದಾಯಿಕ ಔಷಧಿಗಳನ್ನು ಬಹಳ ಪ್ರಾಚೀನ ಕಾಲದಿಂದಲೂ ಜನರು ಬಳಕೆ ಮಾಡುತ್ತಿರುವ ಔಷಧಿಯಾಗಿದ್ದು, ಕಾಲ ಬೆಳೆಯುತ್ತಿದ್ದಂತೆ ಜನರು ಆಧುನಿಕ ವೈಜ್ಞಾನಿಕ ಔಷಧಿಯ ಮೂರೇ ಹೋಗಿದ್ದಾರೆ. ಆದರೂ ಆಧುನಿಕ ಔಷಧಿಯಲ್ಲಿ ದೊರೆಯದ, ಔಷಧಿಯ ಮೂಲಗಳು ಸಾಂಪ್ರದಾಯಿಕ ಔಷಧಿಯಲ್ಲಿ ದೊರೆತಿದೆ. ಈ ಕಾರಣಕ್ಕಾಗಿ ಜನರು ಇದನ್ನು ಬಳಕೆ ಮಾಡುತ್ತಿದ್ದಾರೆ ಹಾಗಾದರೆ ಇದರ ಉಪಯೋಗಗಳು ಏನು ಎಂಬುದನ್ನು ತಿಳಿದುಕೊಳ್ಳುವುದು ಬಹಳ ಪ್ರಮುಖವಾಗಿದೆ.

### ಉಪಯೋಗಗಳು

- ಕಡಿಮೆ ವೆಚ್ಚದಾಯಕ
- ಕಡಿಮೆ ಅಡ್ಡ ಪರಿಣಾಮ ಬೀರುವಿಗೆ
- ನಂಬಿಕೆಗೆ ಅರ್ಹವಾಗಿದ್ದು
- ದೇಶಿಯ ಔಷಧಿಯಾಗಿದೆ.
- ಸುಲಭವಾಗಿ ದೊರೆಯುತ್ತದೆ.
- ಕೈಗೆಟುಕುವುದು ಹೆಚ್ಚಾಗಿ
- ಬಲವಾದ ಸಾಂಸ್ಕೃತಿಕ ಗುರುತುಗಳು

## ಸಾಹಿತ್ಯವಲೋಕನ

**ಆಶ್ಚರ್ಯ ಸಂಗಮಿತ್ರ: ಭಾರತದ ಮಣಿಪುರದ ಫೈಟ್ ಬುಡಕಟ್ಟು ಜನಾಂಗದವರ ಸ್ಥಳೀಯ ಔಷಧಿಯ ವಸ್ತುಗಳು ಮತ್ತು ಆರೋಗ್ಯ ರಕ್ಷಣೆ ಅಧ್ಯಯನ, 2006**

ಈ ಲೇಖನದಲ್ಲಿ ನಿಮ್ಮ ಮಣಿಪುರದ ಬುಡಕಟ್ಟು ಪ್ರದೇಶದ ಜನರು ತಮ್ಮ ಆರೋಗ್ಯ ರಕ್ಷಣೆಗೆ ಸ್ಥಳೀಯ ಔಷಧಿಯನ್ನು ಅವಲಂಬಿಸಿದ್ದು, ಅದಕ್ಕೆ ಪೂರಕವಾಗಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಸ್ಥಳೀಯರ ಆರೋಗ್ಯ ಅವರ ಆಹಾರ ಪದ್ಧತಿಯ ಮೇಲೆ ಆಧಾರವಾಗಿರುತ್ತದೆ

ಎಂದು ಈ ಬುಡಕಟ್ಟು ಜನರು ನಂಬಿದ್ದಾರೆ. ನನ್ನ ಪ್ರಕಾರ ಇದನ್ನು ಒಪ್ಪಲೇ ಬೇಕಾದಂತಹ ವಿಷಯವಾಗಿದೆ, ಕಾರಣ ಪ್ರಸ್ತುತ ದಿನಗಳಲ್ಲಿ ಜನರು ಆಧುನಿಕ ರಾಸಾಯನಿಕ ಆಹಾರ ಪದ್ಧತಿಗೆ ಒಳಗಾಗಿ ಮತ್ತು ಸೇವನೆಯಿಂದ ಹೆಚ್ಚು ರೋಗಗಳು ಬರುತ್ತಿರುವುದನ್ನು ನಾವು ಕಾಣಬಹುದು. ಇತ್ತೀಚಿಗೆ ಜನರು ಜಂಕ್ ಫುಡ್ ಸೇವೆಯನ್ನು ಮಾಡುತ್ತಿರುವ ಕಾರಣ ಯಾವ ಯಾವ ರೀತಿಯಾದ ರೋಗಗಳು ಕಂಡುಬರುತ್ತವೆ ಎಂದು ಹೇಳಲು ಸಾಧ್ಯವಾಗುತ್ತಿಲ್ಲ. ಈ ಕಾರಣದಿಂದಾಗಿ ಸ್ಥಳೀಯ ಆಹಾರ ಪದ್ಧತಿಯು ಆರೋಗ್ಯ ಕಾಪಾಡುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ.

**ಅಮೀರ್ ಮಿರ್ಜೈ: ಕೊರನ ವೈರಸ್ ಕಾಯಿಲೆ 2019 ರ ಚಿಕಿತ್ಸೆಗಾಗಿ ಸಾಂಪ್ರದಾಯಿಕ ಔಷಧಿಗಳ ಆಯ್ಕೆ, ಆಗಸ್ಟ್ 2020**

ಇದರಲ್ಲಿ ಲೇಖಕರು 2019ರಲ್ಲಿ ಕೋವಿಡ್ ಬಂದಾಗ ಸಮಾಜದಲ್ಲಿ ಯಾವ ರೀತಿಯ ಸ್ಥಿತಿ ಇತ್ತು ಮತ್ತು ಈ ಸಂದರ್ಭದಲ್ಲಿ ಜನರು ಈ ವೈರಸ್‌ನ ವಿರುದ್ಧವಾಗಿ ಯಾವೆಲ್ಲ ಕ್ರಮಗಳು ಮತ್ತು ಚಿಕಿತ್ಸೆಗಳನ್ನು ಅನುಸರಿಸಿದ್ದರು ಎಂಬುದನ್ನು ಆಧಾರವಾಗಿಟ್ಟುಕೊಂಡು ಆ ಸಂದರ್ಭದಲ್ಲಿ ಸಾಂಪ್ರದಾಯಿಕ ಗಿಡಮೂಲಿಕೆಗಳು ಹೆಚ್ಚು ಪ್ರಾಮುಖ್ಯತೆಯನ್ನು ಪಡೆದುಕೊಂಡವು. ಭಾರತ ಚೀನಾ ಮತ್ತು ಇರಾನ್ ದೇಶಗಳು ಇದನ್ನು ಪ್ರತಿಪಾದಿಸಿದೆ. ಇವರು ನೀಡಿರುವ ಮಾಹಿತಿಯೂ ಹೆಚ್ಚು ಸತ್ಯವಾಗಿದ್ದರು ಸಹ 2019ರ ಪ್ರಾರಂಭದಲ್ಲಿ ಭಾರತ ದೇಶದಲ್ಲಿ ಜನರು ಗಿಡಮೂಲಿಕೆ ಸಸ್ಯಗಳ ಔಷಧಿಗಿಂತಲೂ ಹೆಚ್ಚಾಗಿ ಆಯುರ್ವೇದ ಯೋಗ ಮತ್ತು ಮನೆಯ ಔಷಧಿಯನ್ನು ಬಳಕೆ ಮಾಡಲು ಮುಂದಾಗಿದ್ದಾರೆ. ಭಾರತ ಸರ್ಕಾರವು ಸಹ ಆಯುರ್ವೇದ ಮತ್ತು ಯೋಗ ಬಳಕೆಗೆ ಆದ್ಯತೆಯನ್ನು ನೀಡಿದೆ.

## ಅಧ್ಯಯನದ ವಿಧಾನ

"ಆರೋಗ್ಯ ಕಾಪಾಡುವಲ್ಲಿ ಸಾಂಪ್ರದಾಯಿಕ ಔಷಧಿಗಳ ಬಳಕೆ ಒಂದು ಸಮಾಜಶಾಸ್ತ್ರೀಯ ಅವಲೋಕನಕ್ಕೆ" ಸಂಬಂಧಿಸಿದಂತೆ ಪ್ರಸ್ತುತ ಅಧ್ಯಯನದ ದತ್ತಾಂಶ ಸಂಗ್ರಹಣೆಗಾಗಿ, ನಾನು ಮಾಧ್ಯಮಿಕ ಮಾಹಿತಿ ವಿಧಾನದ ಮೂಲಕ ಮಾಹಿತಿಯನ್ನು ಸಂಗ್ರಹಣೆ ಮಾಡಿರುತ್ತೇನೆ, ನನಗೆ ಲಭ್ಯವಾದ ಕೆಲವು ಮಾಧ್ಯಮಿಕ ಮಾಹಿತಿ ಮೂಲಗಳೆಂದರೆ, ಆಚಾರ್ಯ ಸಂಗಮಿತ್ರರವರು ಬರೆದಿರುವ 'ಸ್ಥಳೀಯ ಔಷಧಿಯ ವಸ್ತುಗಳು ಮತ್ತು ಆರೋಗ್ಯ ರಕ್ಷಣೆಯ' ಲೇಖನ, ಗ್ರಂಥಗಳು, ಕೈಪಿಡಿಗಳು, ನಾಟಿವೈದ್ಯಕ್ಕೆ ಸಂಬಂಧಿಸಿದ ಲೇಖನಗಳು, ಸಂಶೋಧನಾ ಲೇಖನಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ಹೊರಡಿಸಿರುವ ಆಯುಷ್ ಪ್ರೋಟಕಾಲ್ ಮತ್ತು ಯೋಗ ಪ್ರೋಟಕಾಲ್‌ಗಳ ಮುಖಾಂತರ ಮಾಹಿತಿಯನ್ನು ಸಂಗ್ರಹಣೆ ಮಾಡಿದ್ದೇನೆ.

**ಸಾರಾಂಶ**

ಸಾಂಪ್ರದಾಯಿಕ ಔಷಧಿ ಎಂಬುದು ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದುಕೊಂಡಿದ್ದು, ಆರೋಗ್ಯದ ಸಮಸ್ಯೆಗಳು ಮಾನವನು ಈ ಭೂಮಿಗೆ ಬಂದಾಗಿನಿಂದಲೂ ಕಾಣಬಹುದಾಗಿದೆ. ಕಾಲದಿಂದ ಕಾಲಕ್ಕೆ ಆರೋಗ್ಯದ ಸಮಸ್ಯೆಗಳಿಗೆ ಮಾನವನು ಒಂದಲ್ಲ ಒಂದು ರೀತಿ ಚಿಕಿತ್ಸಾಕ್ರಮಗಳನ್ನು ಅನುಸರಿಸುತ್ತಾ ಬಂದಿದ್ದಾನೆ. ವಿಜ್ಞಾನ ತಂತ್ರಜ್ಞಾನ ಎಷ್ಟೇ ಬೆಳೆದರೂ ಸಹ ಕೆಲವೊಂದು ರೋಗಗಳಿಗೆ ನಾವು 21ನೇ ಶತಮಾನದಲ್ಲಿದ್ದರೂ ಲಸಿಕೆ ದೊರೆಯದಂತಾಗಿದೆ, ಇಂತಹ ರೋಗಗಳಿಗೆ ಔಷಧಿ ದೊರೆಯುತ್ತಿರುವುದು ಸಾಂಪ್ರದಾಯಿಕ ಔಷಧಿಯಲ್ಲಿ. ಆರೋಗ್ಯದ ಸಮಸ್ಯೆಗಳು ಮುಂದಿನ ದಿನಗಳಲ್ಲಿಯೂ ಸಹ ಕಂಡು ಬರಬಹುದು, ಯಾವ ರೀತಿಯಾಗಿ ಎಂದು ಹೇಳಲು ಸಾಧ್ಯವಿಲ್ಲ. ಈ ಸಮಸ್ಯೆಗಳಿಗೆ ನಮ್ಮ ಸಂಪ್ರದಾಯಿಕ ಔಷಧಿಯಿಂದ ಚಿಕಿತ್ಸೆ ದೊರೆಯಬಹುದಾಗಿದೆ. ಈ ಕಾರಣಕ್ಕಾಗಿ ಜನರ ಸಂಪ್ರದಾಯಿಕ ಔಷಧಿ ಬಗ್ಗೆ ತಿಳಿಯುವುದು ಮುಖ್ಯವಾಗಿದೆ ಎಂಬುದನ್ನು ನನ್ನ ಅಧ್ಯಯನ ಮೂಲಕ ತಿಳಿಸುತ್ತೇನೆ.

**ಆಧಾರ ಗ್ರಂಥಗಳು:–**

1. ಮಾಗಡಿ ಗುರುದೇವ "ಕರ್ನಾಟಕ ಔಷಧಿ ಸಸ್ಯಗಳು" 1997
2. ವಸುಂದರ "ಔಷಧಿ ಮತ್ತು ಸುಗಂಧ ಸಸ್ಯಗಳ ಕೈಪಿಡಿ" 2000
3. ಇವಾನ್ ಪಿಚ್ಚರ್ "ಮಾಂತಿಕ ವಿದ್ಯೆ ಮತ್ತು ಸ್ಥಳೀಯರ ಅಭಿಪ್ರಾಯ" 2009
4. ಪಂಡಿತ್ ತರಾನಾಥ "ಸುಲಭ ಚಿಕಿತ್ಸೆ" 2018
5. ಅಮೀರ್ ಮಿರ್ಜೈ "ಕಾರೋನ ವೈರಸ್ ಕಾಯಿಲೆ 2019 ಚಿಕಿತ್ಸೆಗಾಗಿ ಸಾಂಪ್ರದಾಯಿಕ ಔಷಧಿಗಳ ಆಯ್ಕೆ ಆಗಸ್ಟ್" 2020
6. ಉನ್ನಿಕೃಷ್ಣನ್ ಪಯ್ಯಪ್ಪಳ್ಳಿಮನೆ "ಪ್ರಾಥಮಿಕ ಆರೋಗ್ಯ ರಕ್ಷಣೆಯಲ್ಲಿ ಸಾಂಪ್ರದಾಯಿಕ ಔಷಧದ ಪಾತ್ರ"
7. ಅಂತರ್ಜಾಲ ಮಾಹಿತಿ
8. http://indianmedicine.nic.in/